

ಪ್ರೊ. ಶ್ರೀನಿವಾಸಯ್ಯ. ಚಿರಂಜೀವಿ ಸಿಂಗ್, ವಿಶುಕುಮಾರ್ ಜೊತೆಗೆ ಭಕ್ತವತ್ಸಲ ದಂಪತಿ



ಸದಸ್ಯರು ತಮ್ಮಲ್ಲಿ ಉದ್ಭವಿಸುವ ವಿವಾದಗಳನ್ನು ನ್ಯಾಯಾಲಯಕ್ಕೆ ಒಯ್ಯದೆ, ಮಂಡಳಿಯಲ್ಲಿಯೇ ಪಂಚಾಯತಿ ವ್ಯವಸ್ಥೆ ಮೂಲಕ ಇತ್ಯರ್ಥಪಡಿಸಿಕೊಳ್ಳುವ ವ್ಯವಸ್ಥೆ ಜಾರಿಯಾಯಿತು. ಈ ಬದಲಾವಣೆಗಳು ಇತರ ರಾಜ್ಯಗಳ ಚಿತ್ರೋದ್ಯಮ ವಾಣಿಜ್ಯ ಮಂಡಳಿಗೆ ಮಾದರಿಯೆನಿಸಿದವು.

1971–72 ರಿಂದ 1976–77ರವರೆಗೆ ಐದು ಸುದೀರ್ಘ ವರ್ಷಗಳ ಕಾಲ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಗೆ ಅಧ್ಯಕ್ಷರಾಗಿದ್ದರು ಭಕ್ತವತ್ಸಲ. ಉದ್ಯಮದ ಒಳಿತಿಗಾಗಿ ಅವರು ಅಧ್ಯಕ್ಷರಾದ ಆರಂಭದಲ್ಲಿಯೇ ಸರ್ಕಾರದ ಜೊತೆ ನೇರ ಸಂಘರ್ಷಕ್ಕಿಳಿದರು. 1971ರಲ್ಲಿ ರಾಜ್ಯ ಸರ್ಕಾರ ಪತನಗೊಂಡು ರಾಜ್ಯಪಾಲರ ಆಡಳಿತ ಜಾರಿಯಾಯಿತು. ಮೂರು ವರ್ಷಗಳ ಹಿಂದೆ ಜಾರಿಯಾದ ಕನ್ನಡ ಚಿತ್ರಗಳಿಗೆ ಸಬ್ಸಿಡಿ ನೀಡುವ ಯೋಜನೆಯನ್ನು ಗುಣಮಟ್ಟದ ಚಿತ್ರಗಳಿಗೆ ಮಾತ್ರ ನೀಡಲಾಗುವುದೆಂಬ ಸರ್ಕಾರದ ನೀತಿಯನ್ನು ಮಂಡಳಿ ಖಂಡಿಸಿತು. ಮೊದಲೇ ಕಡಿಮೆ ಸಂಖ್ಯೆಯಲ್ಲಿ ಚಿತ್ರಗಳು ತಯಾರಾಗುತ್ತಿರುವ ಹಿನ್ನೆಲೆಯಲ್ಲಿ ಹೊಸ ನೀತಿ ಚಿತ್ರೋದ್ಯಮಕ್ಕೆ ಮಾರಕವೆಂದು ಭಕ್ತವತ್ಸಲ ವಿವರಿಸಿದರು. ಚಿತ್ರಗಳ ಗುಣಮಟ್ಟ ನಿರ್ಧರಿಸುವ ಪದ್ಧತಿ ಅವೈಜ್ಞಾನಿಕವೆಂದು ತರ್ಕಬದ್ಧವಾಗಿ ಮಂಡಿಸಿದರು. ಸರ್ಕಾರ ಮನರಂಜನಾ ತೆರಿಗೆಯ ಮೇಲೆ ವಿಧಿಸಿದ್ದ ಸರ್‌ಚಾರ್ಜ್‌ನ ಔಚಿತ್ಯವನ್ನು ಪ್ರಶ್ನಿಸಿದರು. ಕನ್ನಡ ಚಿತ್ರಗಳಿಗೆ ಸಂಪೂರ್ಣ ತೆರಿಗೆ ವಿನಾಯಿತಿ ನೀಡಲು ಒತ್ತಾಯಿಸಿದರು. (ಮುಂದೆ 1998ರಲ್ಲಿ ಇದು ಜಾರಿಯಾಯಿತು.)

ನಿರ್ಮಾಪಕರ ಗಿಲ್ಡ್‌ನ ಅಧ್ಯಕ್ಷ ಡಿ. ರಾಜಗೋಪಾಲ್ ಅವರೊಡನೆ ಊಟಿಗೆ ತೆರಳಿ ಅಲ್ಲಿ ತಂಗಿದ್ದ ರಾಜ್ಯಪಾಲರನ್ನು ಭೇಟಿ ಮಾಡಿ ಸರ್ಕಾರದ ನೀತಿಯ ವಿರುದ್ಧ ಪ್ರತಿಭಟನೆ ದಾಖಲಿಸಿದರು. ಫಲ ನೀಡದಿದ್ದಾಗ ನೇರ ಸಂಘರ್ಷಕ್ಕಿಳಿದರು. ಮಂಡಳಿಯ ನಿರಂತರ ಹಕ್ಕೊತ್ತಾಯದಿಂದ ಸರ್ಕಾರದ ಎಲ್ಲ ಸಲಹಾ ಸಮಿತಿಗಳಲ್ಲಿ, ಮಂಡಳಿಗಳಲ್ಲಿ, ವಾಣಿಜ್ಯ ಮಂಡಳಿಗೆ ಪ್ರಾತಿನಿಧ್ಯ ದೊರೆಯಿತು. ಕನ್ನಡ ಚಿತ್ರೋದ್ಯಮಕ್ಕೆ ಸರ್ಕಾರದ ನೆರವು ವಿಸ್ತರಿಸಲು ಗಟ್ಟಿದನಿಯಲ್ಲಿ ಆಗ್ರಹಪಡಿಸಿ ಸಾಕಷ್ಟು ಯಶಸ್ಸು ಕಂಡರು. ಕನ್ನಡ ಚಿತ್ರಗಳ ಆರ್ಥಿಕ ಭದ್ರತೆಯನ್ನು ಹೆಚ್ಚಿಸುವ ದೃಷ್ಟಿಯಿಂದ, ಬೆಂಗಳೂರಿನ ಎಲ್ಲ ಪ್ರಥಮ ದರ್ಜೆಯ ಚಿತ್ರಮಂದಿರಗಳಲ್ಲಿ ಪ್ರದರ್ಶನವಾಗುವ ಚಿತ್ರಗಳ ಗಳಿಕೆಯನ್ನು ಪ್ರದರ್ಶಕರು, ನಿರ್ಮಾಪಕರು ನಿಗದಿತ ಶೇಕಡವಾರು ಹಂಚಿಕೊಳ್ಳಬೇಕೆಂಬ ನಿಯಮವನ್ನು 1974ರಲ್ಲಿ ಜಾರಿಗೆ ತಂದರು. ಇದೊಂದು ಕ್ರಾಂತಿಕಾರಕ ಹೆಜ್ಜೆ. ನಿರ್ಮಾಪಕರ ಒಡಕಿನಿಂದ ಕೆಲವೇ ವಾರಗಳಲ್ಲಿ ಅದು ನಿಂತಿತು.

ಡಬ್ಬಿಂಗ್‌ಗೆ ನಿರ್ಬಂಧ: ಕನ್ನಡಕ್ಕೆ ಪಿಡುಗಾಗಿ ಪರಿಣಮಿಸಬಹುದೆಂದು ಭಾವಿಸಿದ್ದ, ಡಬ್ಬಿಂಗ್ ಆದ ಚಿತ್ರಗಳಿಗೆ 1975ರಲ್ಲಿ ವಾಣಿಜ್ಯ ಮಂಡಳಿ ನಿರ್ಬಂಧ ಹೇರಿತು. ವರ್ಷಕ್ಕೆ ಕನಿಷ್ಠ ಹನ್ನೆರಡು ವಾರ ಕನ್ನಡ ಚಿತ್ರಗಳನ್ನು ಕಡ್ಡಾಯವಾಗಿ ಪ್ರದರ್ಶಿಸುವ ನಿಯಮವನ್ನು 1975ರಲ್ಲಿ ರೂಪಿಸಿತು. ಆದರೆ ಯಶಸ್ವಿಯಾಗಿ ಜಾರಿಯಾಗಲಿಲ್ಲ. ರಾಜ್ಯಕ್ಕೆ ಕರ್ನಾಟಕ ಎಂದು 1973ರಲ್ಲಿ ಅಧಿಕೃತವಾಗಿ ನಾಮಕರಣ ಮಾಡುವ ಒಂದು ವರ್ಷ ಮೊದಲೇ ಮೈಸೂರು ಚಲನಚಿತ್ರ ವಾಣಿಜ್ಯ ಮಂಡಳಿಯ ಹೆಸರನ್ನು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಎಂದು ಬದಲಾಯಿಸಿದ್ದು ಭಕ್ತವತ್ಸಲರ ಅಧಿಕಾರದ ಆರಂಭದಲ್ಲಿ.

ಅವರು ಬಹುದೊಡ್ಡ ಪುಸ್ತಕಪ್ರೇಮಿ. ಚಿತ್ರೋದ್ಯಮದ ಬೆಳವಣಿಗೆಗೆ ಕನ್ನಡದಲ್ಲಿ ಲಭ್ಯವಿರುವ ಶ್ರೀಮಂತ ಸಾಹಿತ್ಯವನ್ನು ತೆರೆಗೆ ಅಳವಡಿಸುವ ಪರಂಪರೆ ದೊಡ್ಡದಾಗಿ ಬೆಳೆಯಬೇಕೆಂದು ಪ್ರತಿಪಾದಿಸಿದ್ದರು. 'ಕನ್ನೇಶ್ವರ ರಾಮ'ನ ಕತೆಯನ್ನು ತೆರೆಗೆ ತರುವ ಹಂಬಲದಿಂದ ಎಸ್.ಕೆ. ನಾಡಿಗ್ ಅವರ ಅದೇ ಹೆಸರಿನ ಕಾದಂಬರಿಯನ್ನು ಅಂತಾರಾಷ್ಟ್ರೀಯ ಖ್ಯಾತಿ ಪಡೆದ ಎಂ.ಎಸ್. ಸತ್ಯು ನಿರ್ದೇಶನದಲ್ಲಿ ನಿರ್ಮಿಸಿದರು. ಹಿಂದೀ ಪ್ರತಿಭೆಗಳಾದ ಅಮೋಲ್ ಪಾಲೇಕರ್, ಶಬನಾ ಆಜ್ಮಿ, ಟಾಂ ಆಲ್ಟರ್ ಜೊತೆಗೆ ನಾಯಕನಾಗಿ ಅನಂತ ನಾಗ್ ನಟಿಸಿದ 'ಕನ್ನೇಶ್ವರ ರಾಮ' ಆರ್ಥಿಕವಾಗಿ ಕೈಹಿಡಿಯಲಿಲ್ಲ. ರಾಷ್ಟ್ರೀಯ ಮತ್ತು ಪ್ರಾದೇಶಿಕ ಭಾಷೆಯ ಪ್ರತಿಭೆಗಳ ಸಂಗಮ ಯಶಸ್ಸು ಕಂಡಿತ್ತು.

ಭಕ್ತವತ್ಸಲ ಅವರು ಫಿಲಂ ಫೆಡರೇಷನ್ ಆಫ್ ಇಂಡಿಯಾ ಸಂಸ್ಥೆಗೆ ಎರಡು ಬಾರಿ ಹಾಗೂ ದಕ್ಷಿಣ ಭಾರತ ಚಲನಚಿತ್ರ ಮಂಡಳಿಗೆ ಒಂದು ಬಾರಿ ಅಧ್ಯಕ್ಷರಾಗಿದ್ದರು. ಕೇಂದ್ರ ಚಲನಚಿತ್ರ ಪ್ರಮಾಣೀಕರಣ ಮಂಡಳಿ (ಅಂದಿನ ಸೆನ್ಸಾರ್ ಬೋರ್ಡ್), ಎನ್.ಎಫ್.ಡಿ.ಸಿ. ಮುಂತಾದ ರಾಷ್ಟ್ರಮಟ್ಟದ ಮಂಡಳಿಗಳಲ್ಲಿಯೂ ಸದಸ್ಯರಾಗಿದ್ದರು. ರಾಷ್ಟ್ರೀಯ ಚಲನಚಿತ್ರ ಪುರಸ್ಕಾರ ಆಯ್ಕೆ ಮಂಡಳಿಯ ತೀರ್ಪುಗಾರರಾಗಿಯೂ ಸೇವೆ ಸಲ್ಲಿಸಿದರು.

ಅವರು ದಕ್ಷಿಣ ಭಾರತ ಫಿಲಂ ಚೇಂಬರ್ ಅಧ್ಯಕ್ಷರಾಗಿದ್ದಾಗ ಬೆಂಗಳೂರಿನಲ್ಲಿ ಮೊದಲ ಬಾರಿಗೆ 1980ರಲ್ಲಿ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ನಡೆಯಿತು. ಚಿತ್ರೋತ್ಸವದ ಅಧ್ಯಕ್ಷರೂ ಅವರೇ. ಸತ್ಯಜಿತ್ ರೇ, ರೋಮನ್ ಪೊಲಾನ್ಸ್ಕಿ ಮೊದಲಾದ ಜಗತ್ಪ್ರಸಿದ್ಧ ನಿರ್ದೇಶಕರನ್ನು ಬೆಂಗಳೂರಿನಲ್ಲಿ ಸಾರ್ವಜನಿಕರು ನೋಡಿದ್ದು ಆಗಲೇ.

ಸಂಗೀತ, ಆಹಾರ, ಉಡುಪು, ಓದು, ಬರಹ, ಸ್ನೇಹಿತರ ಕೂಟ ಎಲ್ಲದರಲ್ಲಿಯೂ ಅಚ್ಚುಕಟ್ಟುತನದ ಭಕ್ತವತ್ಸಲ, ಸೊಗಸಾದ ಮಾತುಗಾರಿಕೆಗೆ ಸ್ನೇಹವಲಯದಲ್ಲಿ ಜನಪ್ರಿಯರಾಗಿದ್ದರು. ಅವರ ಹೆಸರು ವಿವಾದವೊಂದರಲ್ಲಿ ತಳುಕು ಹಾಕಿಕೊಂಡಿದ್ದಿದೆ. ಗಿರೀಶ್ ಕಾರ್ನಾಡ್ ನಿರ್ದೇಶನದ 'ಕಾಡು' ಚಿತ್ರದ ನಾಯಕಿ ಕಮಲತ್ತೆಯ ಪಾತ್ರದಲ್ಲಿ ನಟಿಸಿದವರು ನಂದಿನಿ ಭಕ್ತವತ್ಸಲ (ಭಕ್ತವತ್ಸಲ ಅವರ ಪತ್ನಿ, ಅವರ ಮೂಲ ಹೆಸರು ಪ್ರೇಮಾ) ಆ ಪಾತ್ರಕ್ಕೆ ಇದ್ದ ಕೆಲವೇ ಸಂಭಾಷಣೆಗಳನ್ನು ಬೇರೊಬ್ಬ ಕಲಾವಿದೆಯಿಂದ ಕಂಠದಾನ ಮಾಡಿಸಿದ್ದರು. ನಂದಿನಿ ಅವರು 1973ರಲ್ಲಿ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳ ಅತ್ಯುತ್ತಮ ನಟಿ ವಿಭಾಗದ ಪ್ರಶಸ್ತಿಗೆ ಆಯ್ಕೆಯಾದರು. ಕನ್ನಡಕ್ಕೆ ದೊರೆತ ಮೊದಲ ಊರ್ವಶಿ ಪ್ರಶಸ್ತಿ. ಆದರೆ ಪ್ರಶಸ್ತಿ ಆಯ್ಕೆ ಸಮಿತಿಯಲ್ಲಿ ಭಕ್ತವತ್ಸಲ ಅವರೂ ಸದಸ್ಯರಾಗಿದ್ದದ್ದು ವಿವಾದಕ್ಕೆ ಕಾರಣವಾಯಿತು.

ಶಿವಮೊಗ್ಗದಿಂದ ಬೆಂಗಳೂರಿಗೆ ಸ್ಥಳಾಂತರಗೊಂಡು ನೆಲೆಸಿದ ಭಕ್ತವತ್ಸಲ ಅವರು, ಈ ನಗರವನ್ನು ಗಾಢವಾಗಿ ಪ್ರೀತಿಸುತ್ತಿದ್ದರು. ಬೆಂಗಳೂರು ಮಹಾನಗರ ಪಾಲಿಕೆ ಕೆ.ಎಚ್. ರಸ್ತೆಯಿಂದ ರೆಸಿಡೆನ್ಸಿ ರಸ್ತೆ ತಲುಪಲು ರಿಚ್‌ಮಂಡ್ ಸರ್ಕಲ್ ಮೇಲೆ ಹಾದುಹೋಗುವ ಮೇಲುಸೇತುವೆ ನಿರ್ಮಿಸಿತ್ತು. ಆದರೆ ರಿಚ್‌ಮಂಡ್ ಸರ್ಕಲ್‌ನಿಂದ ಕೆಂಗಲ್ ಹನುಮಂತಯ್ಯ ರಸ್ತೆಗೆ ಸೇರುವ ಸೇತುವೆ ತಳದ ರಸ್ತೆ ಕಿರಿದಾಗಿತ್ತು. ರಸ್ತೆಯ ಪಶ್ಚಿಮ ಪಾರ್ಶ್ವದಲ್ಲಿ ಕಾಲುಹಾದಿ ಇರಲಿಲ್ಲ. ಆ ಪಾರ್ಶ್ವದಲ್ಲಿ ಭಕ್ತವತ್ಸಲ ಅವರ ಕುಟುಂಬಕ್ಕೆ ಸೇರಿದ ಆಸ್ತಿ ಕಟ್ಟಡಗಳಿದ್ದವು. ಅಂದಿನ ಪಾಲಿಕೆ ಆಯುಕ್ತರು (2004) ಭಕ್ತವತ್ಸಲರವರ ಮುಂದೆ ಸಮಸ್ಯೆ ಹೇಳಿದಾಗ, ಫುಟ್‌ಪಾತ್ ನಿರ್ಮಿಸಲು ರಿಚ್‌ಮಂಡ್ ಸರ್ಕಲ್‌ನಿಂದ ಕೆ.ಎಚ್. ರಸ್ತೆವರೆಗೆ ಯಾವ ಪರಿಹಾರವನ್ನೂ (ನಗದು, ಟಿ.ಡಿ.ಆರ್) ಕೇಳದೆ ಕೋಟ್ಯಾಂತರ ರೂಪಾಯಿ ಮೌಲ್ಯದ ಭೂಮಿಯನ್ನು ಉಚಿತವಾಗಿ ನೀಡಿದರು. ಇದು ಭಕ್ತವತ್ಸಲರ ಉದಾತ್ತ ಗುಣಕ್ಕೆ ಉದಾಹರಣೆ. ●